Literacy for a Billion

Movie: Ganeshana Mahime
Year: 1981

Song: Ajanu Hari Rudraadigalu
Lyricist: Chi Udayashankar

ಅಜನು ಹರಿ ರುದ್ರಾದಿಗಳು
ಅನವರತ ಪೂಜಿಸುವ
ಮೂಜಗವು ಭಕ್ತಿಯಲಿ
ಶಿರಬಾಗಿ ವಂದಿಸುವ
ಗಜಮುಖನೇ
ಗೌರೀಸುತನೇ
ಗಣೇಶನೇ
ಕಣ್ತೆರೆಯ ಬಾರದೇ
ನನ ನೋಡಬಾರದೇ
ಮೊರೆಯು ಕೇಳದೇ
ಸ್ವಾಮಿ ದಯವು ಬಾರದೇ
ಕಣ್ತೆರೆಯ ಬಾರದೇ
ನನ ನೋಡಬಾರದೇ
ಮೊರೆಯು ಕೇಳದೇ
ಸ್ವಾಮಿ ದಯವು ಬಾರದೇ
ಇಂಥ ಮೌನವು ಇನು ಏತಕೆ
ನಿನ ಮನದಲಿ ಹೇಳು ಏನಿದೆ
ಇಂಥ ಮೌನವು ಇನು ಏತಕೆ
ನಿನ ಮನದಲಿ ಹೇಳು ಏನಿದೆ
ಬಿಡಲಾರೆ ಶಿವನಾಣೆ
ನನ ಹರಸದೇ
ಪತಿಯ ಕಾಪಾಡದೇ
ಕಣ್ತೆರೆಯ ಬಾರದೇ
ನನ ನೋಡಬಾರದೇ
ಮೊರೆಯು ಕೇಳದೇ

ಸ್ವಾಮಿ ದಯವು ಬಾರದೇ
ಹುಲ್ಲುಗರಿಕೆಯೋ ಬಿಲ್ವಪತ್ರೆಯೋ
ಎಲೆಯ ಎಸೆದರೂ ಸಾಕೆನುವೆ
ಯಾರೇ ಕೂಗಲೀ ಹೇಗೇ ಬೇಡಲೀ
ಭಕ್ತಿಯೊಂದಿರೆ ನೀ ಬರುವೆ
ಆ ಕರುಣೆ ಇಂದು ಏನಾಗಿದೆ
ನಿನ ಮನಸಿದೇಕೆ ಕಲ್ಲಾಗಿದೆ
ಇಂಥ ಮೌನವು ಇನು ಏತಕೆ
ನಿನ ಮನದಲಿ ಹೇಳು ಏನಿದೆ
ಬಿಡಲಾರೆ ಶಿವನಾಣೆ
ನನ ಹರಸದೇ
ಪತಿಯ ಕಾಪಾಡದೇ
ಕಣ್ತೆರೆಯ ಬಾರದೇ
ನನ ನೋಡಬಾರದೇ
ಮೊರೆಯು ಕೇಳದೇ
ಸ್ವಾಮಿ ದಯವು ಬಾರದೇ

ಎಲ್ಲ ಸಿದ್ಧಿಗೂ ಎಲ್ಲ ವಿದ್ಯೆಗೂ
ಮೊದಲ ಪೂಜೆಯು ನಿನಗೇನೇ
ಎಲ್ಲ ಕಥೆಯಲಿ ಎಲ್ಲ ಕಾವ್ಯದಿ
ಮೊದಲ ಪ್ರಾರ್ಥನೆ ನಿನದೇನೇ
ನಿನ ಮಹಿಮೆ ಏನೋ ನಾ ಬಲ್ಲೆನು
ನಿನ ಕೋಪ ಇನು ತಾಳಲಾರೆನು
ಇಂಥ ಮೌನವು ಇನು ಏತಕೆ
ನಿನ ಮನದಲಿ ಹೇಳು ಏನಿದೆ

ಬಿಡಲಾರೆ ಶಿವನಾಣೆ
ನನ ಹರಸದೇ
ಪತಿಯ ಕಾಪಾಡದೇ
ಎಷ್ಟು ಅತ್ತರೂ ಸುಮ್ಮನೇಕಿಹೆ
ನನ ಕಣ್ಣೀರು ಪನೀರೇ
ಎಷ್ಟು ಕೂಗಿದರೂ ಕೇಳದಂತಿಹೆ

ಇಲ್ಲೆ ಇದ್ದರೂ ನನೆದುರೇ
ನಮ್ಮ ತಪ್ಪನು ನೀನು ಕ್ಷಮಿಸದೇ
ಕೊಟ್ಟ ಶಾಪವ ಅಳಿಸಿ ಹಾಕದೇ
ನಮ್ಮ ಬಾಳಲಿ ಬೆಳಕು ತುಂಬದೇ
ಬಿಡಲಾರೆ ಶಿವನಾಣೆ
ಬಿಡಲಾರೆ ಶಿವನಾಣೆ

Disclaimer: PlanetRead does not own these lyrics and is not using them for any commercial purpose. For over 20 years, PlanetRead has been subtitling Bollywood songs for mass literacy. These lyrics are being offered as part of PlanetRead's literacy development initiative.

PlanetRead is a tax-exempt, not-for-profit: 501(c) (3) in the United States and 80(G) in India.